ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು
ನಿರ್ದೇಶಕರು
ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ

**OFFICE OF THE COMMISSIONER
FOR INDUSTRIAL DEVELOPMENT AND
DIRECTOR OF INDUSTRIES & COMMERCE**

ನಂ. ೪೯, ೨ನೇ ಮಹಡಿ, ಖನಿಜ ಭವನ,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-೫೬೦ ೦೦೧.
No. 49, 2nd Floor, Khanija Bhavan,
Race Course Road, Bengaluru - 560 001.
ಕಛೇರಿ / Off. : 080-2238 6796
ಈ-ಮೇಲ್ : commissioner.kis@nic.in

ಸಂಖ್ಯೆ: ವಿಟಿಪಿಸಿ/ಉನಿ/ಎಂಡಿಎ/2022-23 ದಿನಾಂಕ: 08-11-2022

## ಸುತ್ತೋಲೆ

ವಿಷಯ: ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಮಾರ್ಗಸೂಚಿಗಳಿಗೆ ಸ್ಪಷ್ಟೀಕರಣ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ ಸಿಐ 36 ಎಸ್.ಪಿ.ಐ. 2019 ಬೆಂಗಳೂರು ದಿನಾಂಕ 24-07-2019.

2) ಸರ್ಕಾರದ ಪತ್ರ ಸಂಖ್ಯೆ ಸಿಐ 80 ಎಸ್.ಪಿ.ಐ. 2022 ದಿನಾಂಕ 29-03-2022.

*****

ರಾಜ್ಯದಿಂದ ರಫ್ತು ಹಾಗೂ ವ್ಯಾಪಾರವನ್ನು ಉತ್ತೇಜಿಸಲು ಕುಶಲಕರ್ಮಿ, ಸೂಕ್ಷ್ಮ ಮತ್ತು ಸಣ್ಣ ರಫ್ತು ಉತ್ಪಾದನಾ ಘಟಕಗಳಿಗೆ ರಾಷ್ಟ್ರೀಯ/ ಅಂತರಾಷ್ಟ್ರೀಯ ವ್ಯಾಪಾರ/ ವಸ್ತು ಪ್ರದರ್ಶನ ಮೇಳಗಳಲಿ ಭಾಗವಹಿಸಲು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ನೀಡಲು ಉಲ್ಲೇಖ (1)ರ ಸರ್ಕಾರದ ಆದೇಶದ ನಿಯಮಾವಳಿಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಈ ಆದೇಶದಂತೆ, ಅನುಮೋದಿತ ರಾಷ್ಟ್ರೀಯ/ ಅಂತರಾಷ್ಟ್ರೀಯ ವ್ಯಾಪಾರ/ ವಸ್ತು ಪ್ರದರ್ಶನ ಮೇಳಗಳಲ್ಲಿ ಗರಿಷ್ಠ 20 ಸದಸ್ಯರ ನಿಯೋಗವು ಭಾಗವಹಿಸಲು ಅವಕಾಶ ಕಲ್ಪಿಸಿದೆ. ಒಂದು ಅಥವಾ ಒಂದಕ್ಕಿಂತ ಹೆಚ್ಚು ನಿಯೋಗಗಳು ಹಾಗೂ 20ಕ್ಕಿಂತ ಹೆಚ್ಚು ಅರ್ಜಿಗಳು ಭಾಗವಹಿಸಲು ಸಲ್ಲಿಸಿದ್ದಲ್ಲಿ ಈ ರೀತಿಯಾಗಿ ಭಾಗವಹಿಸುವ ನಿಯೋಗಗಳ ಒಟ್ಟು ಸದಸ್ಯರನ್ನು ಪರಿಗಣಿಸಿ ಒಟ್ಟಾರೆಯಾಗಿ ಗರಿಷ್ಠ 20 ಸದಸ್ಯರಿಗೆ ಮಾತ್ರ ಈ ಕೆಳಗಿನ ಮಾನದಂಡಗಳಂತೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ನೀಡಲು ಕ್ರಮ ವಹಿಸಲು ಸೂಚಿಸಿದೆ.

**ಮಾನದಂಡಗಳು:**

1) ಅಂತರಾಷ್ಟ್ರೀಯ ವ್ಯಾಪಾರ/ ವಸ್ತು ಪ್ರದರ್ಶನ/ ಮೇಳಗಳಲ್ಲಿ ಭಾಗವಹಿಸಲು ತೆರಳುವ ಮುಂಚೆ ಪ್ರತಿ ಅರ್ಹ ಘಟಕದ ಸದಸ್ಯ ವೈಯಕ್ತಿಕವಾಗಿ ಅರ್ಜಿಯಲ್ಲಿ ಸಲ್ಲಿಸಿ, ವಿಟಿಪಿಸಿ ಸಂಸ್ಥೆಯಿಂದ ಕಡ್ಡಾಯವಾಗಿ ತಾತ್ವಿಕ ಅನುಮೋದನೆಯನ್ನು ಪಡೆಯತಕ್ಕದ್ದು.

2) ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವ್ಯಾಪಾರ/ ವಸ್ತು ಪ್ರದರ್ಶನ/ ಮೇಳಗಳಲ್ಲಿ ಭಾಗವಹಿಸಲು ಈಗಾಗಲೇ ರಫ್ತಿನಲ್ಲಿ ತೊಡಗಿರುವ ಕುಶಲಕರ್ಮಿ, ಸೂಕ್ಷ್ಮ ಮತ್ತು ಸಣ್ಣ ರಫ್ತು ಉತ್ಪಾದನಾ ಘಟಕಗಳಿಗೆ ಪ್ರಥಮ ಆದ್ಯತೆ ಹಾಗೂ ಮೊದಲನೇ ಬಾರಿಗೆ ಭಾಗವಹಿಸುವವರನ್ನು ಉತ್ತೇಜಿಸಬೇಕು. ಈಗಾಗಲೇ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಪಡೆದ ಘಟಕಗಳನ್ನು ಆನಂತರದಲ್ಲಿ ಪರಿಗಣಿಸುವುದು

3) ಸದಸ್ಯರು ಸಲ್ಲಿಸುವ ಅರ್ಜಿ ದಿನಾಂಕಕ್ಕೆ ಅನುಗುಣವಾಗಿ ಅನುಕ್ರಮವಾಗಿ ಮಾನ್ಯವನ್ನು ನೀಡಿ ಒಂದು (೧) ಅನುಮೋದಿತ ವ್ಯಾಪಾರ/ ವಸ್ತು ಪ್ರದರ್ಶನ/ ಮೇಳಕ್ಕೆ ಒಟ್ಟು ಇಪ್ಪತ್ತು (20) ಸದಸ್ಯರಿಗೆ ಮಾತ್ರ ಅನುಮೋದನೆ ನೀಡಲು ಕ್ರಮ ವಹಿಸುವುದು.

ಮುಂದುವರೆದು, ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳಂತೆ ಹಾಗೂ ಮೇಲಿನ ಮಾನದಂಡದಂತೆ ಅರ್ಹ ಘಟಕಗಳನ್ನು ಪರಿಗಣಿಸಿ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ನೀಡಲು ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

[ಗುಂಜನ್ ಕೃಷ್ಣ]
ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು
ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಇವರಿಗೆ,

1. ನಿರ್ದೇಶಕರು (ರಫ್ತು) ಮತ್ತು ವ್ಯವಸ್ಥಾಪಕ ನಿರ್ದೇಶಕರು, ವಿಟಿಪಿಸಿ, ಬೆಂಗಳೂರು- ಸೂಕ್ತ ಕ್ರಮಕ್ಕೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗೆ.